**ದಿನಾಂಕ 08-9-2021 ರಂದು ಬೆಳಗ್ಗೆ 11.30 ಗಂಟೆಗೆ ಕುಲಪತಿಗಳ ಸಭಾಂಗಣ, ಕೃವಿವಿ., ರಾಯಚೂರಿನಲ್ಲಿ ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 49ನೇ ಸಭೆಯ ನಡವಳಿಗಳು:**

**ಉಪಸ್ಥಿತರು:**

| | | | |
|---|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು | ಭೌತಿಕ |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾಆಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, | ಸದಸ್ಯರು | ವರ್ಚುವಲ್ |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 4. | ಶ್ರೀ ರಫೀ ಅಹ್ಮದ್, ಎಂ.ಎಸ್. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಕೃಷಿ ಇಲಾಖೆ (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 5. | ಶ್ರೀ ಕೊಟ್ರಪ್ಪ ಬಿ. ಕೊರೇರ, ರಾಯಚೂರು | ಸದಸ್ಯರು | ಭೌತಿಕ |
| 6. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು | ಭೌತಿಕ |
| 7. | ಶ್ರೀ ಮಹಾಂತೇಶ್‌ಗೌಡ ಪಾಟೀಲ್, ಕೊಪ್ಪಳ | ಸದಸ್ಯರು | ವರ್ಚುವಲ್ |
| 8. | ಶ್ರೀ ಜಿ. ಶ್ರೀಧರ ಕೆಸರಹಟ್ಟಿ, ಗಂಗಾವತಿ | ಸದಸ್ಯರು | ಭೌತಿಕ |
| 9. | ಶ್ರೀ ಸುನಿಲ್, ರಾಯಚೂರು | ಸದಸ್ಯರು | ಭೌತಿಕ |
| 10. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ | ಭೌತಿಕ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಕೋವಿಡ್–19 ಸಾಂಕ್ರಾಮಿಕ ರೋಗದ ನಿಯಂತ್ರಣಾ ಕ್ರಮವಾಗಿ 49ನೇ ಸಭೆಯನ್ನು ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸುತ್ತಾ, ಹಾಜರಿದ್ದ ಎಲ್ಲಾ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳನ್ನು ಸ್ವಾಗತಿಸಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| ಐಟಂ–1 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 48 ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು.**<br>**ಠರಾವು:**<br>ದಿನಾಂಕ 05-05-2021 ರಂದು ಕ್ರಮವಾಗಿ ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 48ನೇ ಸಭೆಯ ನಡುವಳಿಗಳನ್ನು ಸ್ಥಿರೀಕರಿಸಲಾಯಿತು.<br>**(ಕ್ರಮ : ಕುಲಸಚಿವರು)** |
| ಐಟಂ–2 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 48 ಸಭೆಯ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**<br>**ಠರಾವು:**<br>ದಿನಾಂಕ 05-05-2021 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 48 ನೇ ಸಭೆಯ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು.<br>**(ಕ್ರಮ : ಕುಲಸಚಿವರು)** |

**ಐಟಂ–3** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಪ್ರಮುಖ ಅಧಿಕಾರಿಗಳ ನೇಮಕಾತಿಯ ಆಯ್ಕೆ ಪಟ್ಟಿಗೆ ಅನುಮೋದನೆ ಕುರಿತು.**

**ಠರಾವು:**

ಆಯ್ಕೆ ಸಮಿತಿಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಖಾಲಿ ಇರುವ ಅಧಿಕಾರಿ ಹುದ್ದೆಗಳ ನೇಮಕಾತಿ ಸಂಬಂಧ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಮಂಡಳಿಯ ಮುಂದೆ ಪ್ರಸ್ತಾಪಿಸಲಾಗಿ, ಮಂಡಳಿಯ ಸದಸ್ಯರು ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಕುಲಂಕಷವಾಗಿ ಪರಿಶೀಲಿಸಿ, ಚರ್ಚಿಸಿ, ನಡವಳಿಗಳ ಸ್ಥಿರೀಕರಣಕ್ಕೆ ನಿರೀಕ್ಷಿಸದೇ ತಕ್ಷಣವೇ ನೇಮಕಾತಿ ಆದೇಶ ಹೊರಡಿಸಲು ಅನುಮೋದಿಸಿತು. ಮುಂದುವರೆದು, ಆಯ್ಕೆ ಸಮಿತಿಯ ಶಿಫಾರಸ್ಸುಗಳಲ್ಲಿನ ಪ್ರತೀಕ್ಷಾ ಪಟ್ಟಿಯನ್ನು (waiting list) ನಿರ್ವಹಿಸಲು ಮಾನ್ಯ ಕುಲಪತಿಗಳು ಅಧಿಕೃತರಾಗಿರುತ್ತಾರೆಂದು ಸಭೆಯು ನಿರ್ಣಯಿಸಿತು.

**(ಕ್ರಮ : ಕುಲಪತಿಗಳು / ಡಾ. ಎ. ಪ್ರಭುರಾಜ್, ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ))**

**ಐಟಂ–4** **ಶ್ರೀ ರಾಜಬಕ್ಷಿ ವೈ ಬಡಿಗೇರ್, ಇವರನ್ನು ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿ ಹುದ್ದೆಯಿಂದ ಉಪ–ಹಣಕಾಸು ನಿಯಂತ್ರಣಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಲು ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, ಸದರಿ ಪ್ರಸ್ತಾವನೆಗೆ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು ಹಾಗೂ ಶ್ರೀ ರಾಜಬಕ್ಷಿ ವೈ ಬಡಿಗೇರ್, ಇವರಿಗೆ ಉಪ–ಹಣಕಾಸು ನಿಯಂತ್ರಣಾಧಿಕಾರಿ ಹುದ್ದೆಗೆ ಪದೋನ್ನತಿ ಆದೇಶವನ್ನು ನಡವಳಿಗಳ ಸ್ಥಿರೀಕರಣಕ್ಕೆ ನಿರೀಕ್ಷಿಸದೇ ತಕ್ಷಣವೇ ನೀಡಲು ಠರಾಯಿಸಲಾಯಿತು.

**(ಕ್ರಮ : ಕುಲಸಚಿವರು)**

**ಐಟಂ–5** **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.**

**ಠರಾವು:**

ರೂ. 10.00 ಲಕ್ಷ ಅಧಿಕದ ಈ ಕೆಳಕಂಡ ಹೊಸ ಸಿವಿಲ್ ಕಾಮಾಗಾರಿಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯ ಹಿನ್ನೆಲೆಯಲ್ಲಿ ಕೃವಿವಿ., ರಾಯಚೂರಿನ ಮುಖ್ಯ ಆವರಣ ಮತ್ತು ಅಧೀನದ ಆವರಣದಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| ಕ್ರಮ. ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ.) ಲಕ್ಷಗಳಲ್ಲಿ | ಅನುದಾನ ವಿವರ |
|---|---|---|---|
| I | **ಕೃವಿ.ವಿ.ವಿ. ರಾಯಚೂರು.** | | |
| 1 | a) ಕೃವಿವಿ ರಾಯಚೂರು ಆವರಣದಲ್ಲಿ ಹಣ್ಣು ಮತ್ತು ತರಕಾರಿಗಳ ನಂಜು ನಿವಾರಕ ಸಂಸ್ಕರಣ ಪ್ರಯೋಗಾಲಯದ ನಿರ್ಮಾಣ ಕಾಮಗಾರಿ. **(ಪ್ಲಿಂತ್ ಏರಿಯಾ 7110 ಚ.ಅಡಿ)**<br>b) ಕೃವಿ.ವಿ ರಾಯಚೂರು ಆವರಣದಲ್ಲಿ ಹಣ್ಣುಗಳ ಮಾಗಿಸುವ ಘಟಕಗಳಿಗೆ ಶೆಡ್‌ನ್ನು ನಿರ್ಮಿಸುವ ಕಾಮಗಾರಿ. **(ಪ್ಲಿಂತ್ ಏರಿಯಾ 2475 ಚ.ಅಡಿ)** | 137.00 | ಆರ್.ಕೆ.ವಿ.ವಾಯ್ |
| 2 | ಕೃವಿ.ವಿ.ವಿ. ರಾಯಚೂರು ಆವರಣದಲ್ಲಿ Common Incubation ಕೇಂದ್ರದ ನಿರ್ಮಾಣ ಕಾಮಗಾರಿ. **(ಪ್ಲಿಂತ್ ಏರಿಯಾ 7110 ಚ.ಅಡಿ)** | 100.00 | ಪಿ.ಎಮ್.ಎಫ್.ಎಮ್.ಇ. ಸ್ಕೀಮ್. |

| | | | |
|---|---|---|---|
| 3 | ಕೃ.ವಿ.ವಿ. ರಾಯಚೂರು ಆವರಣದಲ್ಲಿ ಅಣಬೆ ಕೃಷಿಯ ಪ್ರಯೋಗಾಲಯ ನಿರ್ಮಿಸುವ ಕೆಲಸ. **(ಫ್ಲಿಂತ್ ಏರಿಯಾ 1800 ಚ.ಅಡಿ)** | 40.00 | ಆರ್.ಕೆ.ವಿ.ವಾಯ್ |
| **II** | **ವಲಯ ಕೃಷಿ ಸಂಶೋಧನಾ ಕೇಂದ್ರ ಕಲಬುರಗಿ.** | | |
| 4 | ವಲಯ ಕಷಿ ಸಂಶೋಧನಾ ಕೇಂಧ್ರ ಕಲಬುರಗಿ ಆವರಣದಲ್ಲಿ ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣಾ ಮತ್ತು ಮೌಲ್ಯವರ್ಧನೆ ಕೇಂದ್ರದ ನಿರ್ಮಾಣ ಕಾಮಗಾರಿ. **(ಫ್ಲಿಂತ್ ಏರಿಯಾ 2985 ಚ.ಅಡಿ)** | 80.00 | ಆರ್.ಕೆ.ವಿ.ವಾಯ್ 70.00 ಲಕ್ಷ + ಕೃ.ವಿ.ವಿ. ಅನುದಾನ 10.00 ಲಕ್ಷ |
| **III** | **ಕೃಷಿ ಸಂಶೋಧನಾ ಕೇಂದ್ರ ಹಗರಿ** | | |
| | ಕೃಷಿ ಸಂಶೋದನಾ ಕೇಂದ್ರ ಹಗರಿಯಲ್ಲಿ 1 ಲಕ್ಷ ಲೀಟರ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ಮತು ನೆಲ ಸಂಗ್ರಾಹಗಾರ ನಿರ್ಮಿಸುವ ಕೆಲಸ. | 52.00 | ಕೃವಿವಿ ಸಂಶೋಧನಾ ಅನುದಾನ |
| **IV** | **ಕೃಷಿ ಸಂಶೋಧನಾ ಕೇಂದ್ರ ದಢೇಸಗೂರ** | | |
| **5** | ಕೃಷಿ ಸಂಶೋಧನಾ ಕೇಂದ್ರ ದಢೇಸಗೂರಿನಲ್ಲಿ ಕಛೇರಿ ಕಟ್ಟಡ ನಿರ್ಮಿಸುವ ಕೆಲಸ. **(ಫ್ಲಿಂತ್ ಏರಿಯಾ 5355 ಚ.ಅಡಿ)** | 205.10 | ಕೃವಿವಿ ಸಂಶೋಧನಾ ಅನುದಾನ |
| **V** | **ಕೃಷಿ ಮಹಾವಿದ್ಯಾಲಯ, ಕಲಬುರಗಿ** | | |
| **6** | ಕೃಷಿ ಮಹಾವಿದ್ಯಾಲಯ, ಕಲಬುರಗಿಯ ವಿದ್ಯಾರ್ಥಿನಿಯಲದ ವಸತಿನಿಲಯದ ಎರಡನೇ ಮಹಡಿಯ ಕಟ್ಟಡ ಕಾಮಗಾರಿ **(ಫ್ಲಿಂತ್ ಏರಿಯಾ 12654 ಚ.ಅಡಿ)** | 258.00 | ಕೃವಿವಿ ಶಿಕ್ಷಣ ಅನುದಾನ |

**(ಕ್ರಮ : ಆಸ್ತಿ ಅಧಿಕಾರಿ)**

**ಐಟಂ–6** **ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರಯೋಗಾಲಯದ ಪ್ರತಿ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| Sl.No. | Name of the Equipment | Name of the Department/ Project | Qty | Approximate Cost in (Rs. Lakhs) | Funding Agency with allotted Ab. A/c. No. |
|---|---|---|---|---|---|
| 1. | Furniture's and fixtures | Food Microbiology Laboratory, UAS, Raichur. | 01 set | 25.00 | 6772/701 (RKVY sponsored project) |
| 2. | Ion Chromatography | Dept. of Pesticide Residue and Food Quality Analysis Lab, UAS, Raichur. | 01 set | 30.00 | 7553/701 (National Bee board sanctioned project) |
| 3. | Aseptic packing unit with clean room and shifting and erection of existing fruits | Dept. of Processing and Food Engineering, CAE, Raichur. | 1 Unit | 160.00 | 6777/701 (RKVY Project) |

| | | | | | | |
|---|---|---|---|---|---|---|
| | | and vegetable processing unit | | | | |
| | 4. | Automated fruit ripening System (4 No. Of cold chambers each of 5 tonnes capacity with accessories) | Dept. of Processing and Food Engineering, CAE, Raichur. | 1 set | 40.00 | 6777/701<br><br>(RKVY Project) |
| | 5. | Automated Enumeration System | MOFPI Project Dept. of PRFQAL, UAS, Raichur. | 01 set | 30.00 | 7209/701<br><br>(MOFPI funded project) |
| | 6. | Automated system for rapid pathogen detection | MOFPI Project Dept. of PRFQAL, UAS, Raichur. | 01 set | 28.00 | 7209/701<br><br>(MOFPI funded project) |
| | 7. | Previcolior | MOFPI Project Dept. of PRFQAL, UAS, Raichur. | 01 set | 12.50 | 7209/701 (MOFPI funded project) |
| | 8. | Master Clave | MOFPI Project Dept. of PRFQAL, UAS, Raichur. | 01 set | 18.00 | 7209/701<br><br>(MOFPI funded project) |
| | 9. | Laptops | Director SC/ST Cell, UAS, Raichur. | 100 | 65.00 | 6404/701 6405/701 (SCSP/TSP programme of UAS, Raichur) |
| | 10. | Furniture for New Guest House, UAS, Raichur | Estate Office / SPO , UAS, Raichur | As per drawing | 64.24 | UAS Grants |
| | 11. | GC-FID | Dept. of PRFQAL, UAS, Raichur. | 01 set | 26.00 | 6949/701 (RKVY Project) |
| | 12. | Specific Gravity Separator with elevator | Dept. of Processing and Food Engineering, CAE, Raichur. | 01 set | 10.92 | 6795/701 (RKVY Project) |
| | 13. | Millet Flour and Rava Mill | Dept. of Processing and Food Engineering, CAE, Raichur. | 01 unit | 18.00 | 6786/701 (RKVY Project) |

| | | | | | |
|---|---|---|---|---|---|
| 14. | Oxidative Stability Measuring Instrument | Dept. of Processing and Food Engineering, CAE, Raichur. | 01 No | 25.00 | 7209/701 (MOFPI funded project) |
| 15. | RT-PCR | Dept. of Processing and Food Engineering, CAE, Raichur. | 01 No. | 15.00 | 7209/701 (MOFPI funded project) |
| 16. | GIS Software | SUJALA-III Exit strategy, UAS, Raichur. | As per Specification | 15.00 | 5200/303 (Sujala-III) |
| 17. | Onion curing structure | Dept. of Processing and Food Engineering, CAE, Raichur. | 10 Units | 100.00 | 6771/701 (RKVY project) |
| 18. | Onion Storage structure | Dept. of Processing and Food Engineering, CAE, Raichur. | 5 Units | 75.00 | 6771/701 (RKVY project) |

**(ಕ್ರಮ : ಸರಕು ಖರೀದಿ ಅಧಿಕಾರಿ)**

**ಐಟಂ–7**

**ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿಗೆ ಹೊಸ ಬಸ್ಸನ್ನು ಖರೀದಿಗೆ ಅನುಮೋದನೆ ನೀಡುವ ಕುರಿತು.**

ಕಲಬುರಗಿಯ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಗೆ ಒಂದು ಬಸ್ಸನ್ನು ಖರೀದಿಸಲು ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ ಇವರು 2020–21 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮೈಕ್ರೊ /ಮ್ಯಾಕ್ರೋ ಯೋಜನೆಯಡಿಯಲ್ಲಿ ಎಸ್.ಸಿ.ಎಸ್.ಪಿ (ರೂ.3.4 ಲಕ್ಷ), ಟಿ.ಎಸ್.ಪಿ (ರೂ.1.42 ಲಕ್ಷ) ಹಾಗೂ ಇತರ (ರೂ.11.17 ಲಕ್ಷ) ಒಟ್ಟು ಮೊತ್ತ ರೂ. 15.99 ಗಳಿಗೆ ಅನುಮೋದನೆ ನೀಡಿರುತ್ತಾರೆ ಹಾಗೂ ಬಸ್ಸಿನ (ಟಾಟಾ ಸ್ಟಾರ್ ಆಲ್ಟ್ರಾ ಸ್ಕೂಲ್ 48+4+ಡಿ ಮೊಬಲ್) ಒಟ್ಟು ಮೊತ್ತ ರೂ. 26.46 ಲಕ್ಷಗಳ ವೆಚ್ಚದ ಅಂದಾಜು ಇದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

**ಠರಾವು:**

ಚರ್ಚೆಯ ನಂತರ, ಟಾಟಾ ಸ್ಟಾರ್ ಆಲ್ಟ್ರಾ ಸ್ಕೂಲ್ 48+4+ಡಿ ಮೊಬಲ್ ಬಸ್ಸನ್ನು ಖರೀದಿಸಲು ಹೊಂದಾಣಿಕೆಯ ಮೊತ್ತ ರೂ.10.47 ಲಕ್ಷಗಳನ್ನು ವಿಶ್ವವಿದ್ಯಾಲಯದ ಅನುದಾನದಿಂದ ಭರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

**(ಕ್ರಮ : ಸರಕು ಖರೀದಿ ಅಧಿಕಾರಿ)**

**ಐಟಂ–8**

**ಭೀಮರಾಯನಗುಡಿಯಲ್ಲಿರುವ ಕೃಷಿ ವಿಸ್ತರಣ ಶಿಕ್ಷಣ ಕೇಂದ್ರವನ್ನು ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಚಿಂಚೋಳಿಗೆ ಸ್ಥಳಾಂತರಿಸಲು ಅನುಮೋದನೆ ನೀಡುವ ಕುರಿತು.**

**ಠರಾವು:**

ದೀರ್ಘ ಚರ್ಚೆಯ ನಂತರ, ಕೃಷಿ ಮಾಹಿತಿಯಿಂದ ವಂಚಿತರಾಗಿರುವ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ರೈತರ ಅಭಿವೃದ್ಧಿಗಾಗಿ ಭೀಮರಾಯನಗುಡಿಯಲ್ಲಿರುವ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವನ್ನು ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಚಿಂಚೋಳಿಗೆ ಹುದ್ದೆಗಳ ಜೊತೆ ಸ್ಥಳಾಂತರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.

**(ಕ್ರಮ : ವಿಸ್ತರಣಾ ನಿರ್ದೇಶಕರು / ಕುಲಸಚಿವರು)**

| | |
|---|---|
| ಐಟಂ–9 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಮುಖ್ಯ ಆವರಣದಲ್ಲಿ ಭೌತಿಕವಾಗಿ/ ವರ್ಚುವಲ್ ಮುಖಾಂತರ ಕೃಷಿ ಮೇಳ–2021 ಆಯೋಜಿಸಲು ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br><br>ದೀರ್ಘ ಚರ್ಚೆಯ ನಂತರ, ರಾಯಚೂರು ಕೃವಿವಿ.,ಯ 2021–22 ನೇ ಸಾಲಿನ ಕೃಷಿ ಮೇಳವನ್ನು ನವೆಂಬರ್ / ಡಿಸೆಂಬರ್ ತಿಂಗಳಲ್ಲಿ ರಾಯಚೂರಿನ ಮುಖ್ಯ ಆವರಣದಲ್ಲಿ ಕೋವಿಡ್ ಪರಿಸ್ಥಿತಿ ಅನುಗುಣವಾಗಿ ಭೌತಿಕ ಮತ್ತು ವರ್ಚುವಲ್ ಮುಖಾಂತರ ಆಯೋಜನೆ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br><br>**(ಕ್ರಮ : ವಿಸ್ತರಣಾ ನಿರ್ದೇಶಕರು)** |
| ಐಟಂ–10 | **ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯದ ಮಾಹಿತಿ ಪರಿಷ್ಕರಣೆ ಹಾಗೂ ಉನ್ನತಿಕರಿಸಲು ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br><br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಮುಖ್ಯ ಆವರಣದಲ್ಲಿನ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯದ ಮಾಹಿತಿ ಪರಿಷ್ಕರಣೆ ಹಾಗೂ ಉನ್ನತೀಕರಣದ ಕಾರ್ಯವನ್ನು ಕೈಗೊಳ್ಳುವ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿ, ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯದ ಮಾಹಿತಿ ಪರಿಷ್ಕರಣೆ ಹಾಗೂ ಉನ್ನತೀಕರಣದ ಕಾರ್ಯವನ್ನು ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br><br>**(ಕ್ರಮ : ವಿಸ್ತರಣಾ ನಿರ್ದೇಶಕರು)** |
| ಐಟಂ–11 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ 'ಅತ್ಯಾಧುನಿಕ ಕೃಷಿ ತಂತ್ರಜ್ಞಾನದ ಆವಿಷ್ಕಾರ ಹಾಗೂ ಅಭಿವೃದ್ಧಿ ಕೇಂದ್ರ' ವನ್ನು ಗಂಗಾವತಿಯ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ ಸ್ಥಾಪಿಸಲು ಭೂಮಿಯನ್ನು ಒದಗಿಸಲು ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br><br>ಚರ್ಚೆಯ ನಂತರ, ಸರ್ಕಾರದ ಆದೇಶದಂತೆ ಕೃಷಿ ಮಹಾವಿದ್ಯಾಲಯ, ಗಂಗಾವತಿಯ ಆವರಣದಲ್ಲಿ ಅತ್ಯಾಧುನಿಕ ಕೃಷಿ ತಂತ್ರಜ್ಞಾನದ ಆವಿಷ್ಕಾರ ಹಾಗೂ ಅಭಿವೃದ್ಧಿ ಕೇಂದ್ರವನ್ನು (Centre for Innovation and Development in Smart Agriculture) (CIDSAs) ಸ್ಥಾಪಿಸಲು ಅನುವಾಗುವಂತೆ 15,000 ಚದರ ಅಡಿ ಜಾಗವನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br><br>**(ಕ್ರಮ : ಸಂಶೋಧನಾ ನಿರ್ದೇಶಕರು / ಕುಲಸಚಿವರು)** |
| ಐಟಂ–12 | **ಕೃಷಿ ಸಂಶೋಧನಾ ಕೇಂದ್ರ, ಭೀಮರಾಯನಗುಡಿ ಆವರಣದಲ್ಲಿ ಸಾವಯವ ಬೆಲ್ಲ ಉತ್ಪಾದನಾ ಘಟಕ ಸ್ಥಾಪನೆ ಮಾಡುವ ಕುರಿತು.**<br><br>**ಠರಾವು:**<br><br>ಚರ್ಚೆಯ ನಂತರ, ವಿವಿಧ ಕಬ್ಬಿನ ತಳಿಗಳಿಂದ ತಯಾರಿಸಲ್ಪಡುವ ಸಾವಯವ ಬೆಲ್ಲ ತಯಾರಿಕಾ ಘಟಕವು ಯಾದಗಿರಿ ಜಿಲ್ಲೆಯ ಭಾಗದ ರೈತರಿರ ಹಿತದೃಷ್ಟಿಯಿಂದ ಅವಶ್ಯಕವಾಗಿರುವುದರಿಂದ ಕೃಷಿ ಸಂಶೋಧನಾ ಕೇಂದ್ರ, ಭೀಮರಾಯನಗುಡಿಯಲ್ಲಿ ಸಾವಯವ ಬೆಲ್ಲದ ಅತ್ಯುನ್ನತ ತಂತ್ರಜ್ಞಾನವುಳ್ಳ ಮಾದರಿ ಘಟಕವನ್ನು ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು. ಶ್ರೀ ಕೊಟ್ರಪ್ಪ ಬಿ. ಕೊರೇರ, ಸದಸ್ಯರು, ಮಾನ್ಯ ವ್ಯವಸ್ಥಾಪನಾ ಮಂಡಳಿ ಇವರು ರೈತರ ಉತ್ಪಾದಕರ ಸಂಘ ಸಂಸ್ಥೆಯನ್ನು ಕೃಷಿ ಸಂಶೋಧನಾ ಕೇಂದ್ರ, ಭೀಮರಾಯನಗುಡಿಯಲ್ಲಿ ಸ್ಥಾಪಿಸುವಂತೆ ಸಲಹೆ ನೀಡಿದರು.<br><br>**(ಕ್ರಮ : ಸಂಶೋಧನಾ ನಿರ್ದೇಶಕರು)** |

| | |
|---|---|
| ಐಟಂ–13 | **ಇ–ಸ್ಯಾಪ್ ತಂತ್ರಾಂಶವನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ರೈತ ಉತ್ಪಾದಕಾ ಸಂಘಗಳಿಗೆ (8000 ಬಳಕೆದಾರರಿಗೆ) ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ತಂತ್ರಾಂಶದ ವಾರ್ಷಿಕ ನಿರ್ವಹಣೆಯ ವೆಚ್ಚಕ್ಕೆ ಅನುಮೋದನೆ ಕುರಿತು.**<br><br>**ಠರಾವು:**<br><br>ಚರ್ಚೆಯ ನಂತರ, ಕರ್ನಾಟಕ ಸರ್ಕಾರದ ಪ್ರಾಯೋಜಿತ ಇ–ಸ್ಯಾಪ್ ತಂತ್ರಾಂಶವನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ರೈತ ಉತ್ಪಾದಕಾ ಸಂಘಗಳಿಗೆ (8000 ಬಳಕೆದಾರರಿಗೆ) ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ತಂತ್ರಾಂಶದ ವಾರ್ಷಿಕ ನಿರ್ವಹಣೆಯ ವೆಚ್ಚ ರೂ. 2.00 ಕೋಟಿಗೆ (ಪ್ರತಿ ವರ್ಷಕ್ಕೆ) 2021 ರಿಂದ ಅನ್ವಯವಾಗುವಂತೆ ಮುಂದಿನ ಮೂರು ವರ್ಷಗಳವರೆಗೆ ನಿರ್ವಹಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br><br>**(ಕ್ರಮ : ಡಾ. ಎ. ಪ್ರಭುರಾಜ್, ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ))** |
| ಐಟಂ–14 | **ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳು ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಏಕರೀತಿಯ ಸ್ಕೋರ್ ಕಾರ್ಡ್ ಮತ್ತು ಇತರೆ ಮಾನದಂಡಗಳನ್ನು ಅಳವಡಿಸಿಕೊಳ್ಳಲು ಅನುಮೋದನೆ ಕುರಿತು.**<br><br>**ಠರಾವು:**<br><br>ಚರ್ಚೆಯ ನಂತರ, ರಾಯಚೂರು ಕೃವಿವಿ.,ಯಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಏಕರೀತಿಯ ಸ್ಕೋರ್ ಕಾರ್ಡ್ ಮತ್ತು ಇತರೆ ಮಾನದಂಡಗಳನ್ನು ಸರ್ಕಾರದ ಆದೇಶದಲ್ಲಿ ಸೂಚಿಸಿದಂತೆ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲು ಹಾಗೂ ಸದರಿ ಸ್ಕೋರ್ ಕಾರ್ಡ್ ಮತ್ತು ಇತರೆ ಮಾನದಂಡಗಳನ್ನು ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಅನ್ವಯವಾಗುವುದೆಂದು, ಪ್ರಸ್ತುತ ಜಾರಿಯಲ್ಲಿರುವ ನೇಮಕಾತಿಗಳಿಗೆ (ಜಾಹೀರಾತು ಸಂಖ್ಯೆ 16, 18 ಮತ್ತು 19) ಹಳೆಯ ಸ್ಕೋರ್ ಕಾರ್ಡ್ ಮತ್ತು ಇತರೆ ಮಾನದಂಡಗಳೊಂದಿಗೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br><br>**(ಕ್ರಮ : ಕುಲಸಚಿವರು)** |
| ಐಟಂ–15 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹನ್ನೊಂದನೆಯ ಘಟಿಕೋತ್ಸವಕ್ಕೆ ಅತಿಥಿಗಳ ಯಾದಿಯನ್ನು ಅಂತಿಮಗೊಳಿಸುವ ಕುರಿತು.**<br><br>**ಠರಾವು:**<br><br>ಚರ್ಚೆಯ ನಂತರ, ಅಕ್ಟೋಬರ್ 2021 ರ ಎರಡನೇಯ ಪಾಕ್ಷಿಕದಲ್ಲಿ ಭೌತಿಕ ಮತ್ತು ವರ್ಚುವಲ್ ಮುಖಾಂತರ ಏರ್ಪಡಿಸಲು ಉದ್ದೇಶಿಸಿದ ವಿಶ್ವವಿದ್ಯಾಲಯದ ಹನ್ನೊಂದನೇ ಘಟಿಕೋತ್ಸವದ ಅಂಗವಾಗಿ ಸಿದ್ಧಪಡಿಸಲಾದ ಈ ಕೆಳಕಂಡ ಅತಿಥಿಗಳ ಯಾದಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು :<br><br>1 — **ಡಾ. ತ್ರಿಲೋಚನ್ ಮೊಹಪಾತ್ರ,** Secretary (DARE) & Director General (ICAR), ನವದೆಹಲಿ<br>2 — **ಡಾ. ಎ.ಕೆ. ಸಿಂಗ್,** ಉಪ ಮಹಾನಿರ್ದೇಶಕರು (ಕೃಷಿ ವಿಸ್ತರಣೆ), ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ<br>3 — **ಡಾ. ಕೆ. ಶಿವನ್, ನಿರ್ದೇಶಕರು,** ಇಸ್ರೋ, ಬೆಂಗಳೂರು<br>4 — **ಪ್ರೊ. ಡಿ.ಪಿ. ಸಿಂಗ್,** ಅಧ್ಯಕ್ಷರು, ವಿಶ್ವವಿದ್ಯಾಲಯ ಧನಸಹಾಯ ಆಯೋಗ, ನವದೆಹಲಿ |

<table>
<tr><td></td><td>

| | |
|---|---|
| 5 | **ಡಾ.(ಶ್ರೀಮತಿ) ಪಂಕಜ್ ಮಿತ್ತಲ್,** ಪ್ರಧಾನ ಕಾರ್ಯದರ್ಶಿ, ಭಾರತೀಯ ವಿಶ್ವವಿದ್ಯಾಲಯಗಳ ಸಂಘ, ನವದೆಹಲಿ |
| 6 | **ಶ್ರೀಮತಿ ಸುಧಾಮೂರ್ತಿ,** ಅಧ್ಯಕ್ಷೆ, ಇನ್ಫೋಸಿಸ್ ಫೌಂಡೇಶನ್, ಬೆಂಗಳೂರು |

**(ಕ್ರಮ : ಕುಲಸಚಿವರು)**</td></tr>
<tr><td></td><td>ಹೆಚ್ಚುವರಿ ಕಾರ್ಯಸೂಚಿಯ ವಿಷಯಗಳು</td></tr>
<tr><td>ಹೆಚ್ಚುವರಿ ಕಾರ್ಯಸೂಚಿ ಐಟಂ–1</td><td>ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಘಟಕವನ್ನು ಸ್ಥಾಪನೆ ಮಾಡಲು 'ಪಬ್ಲಿಕ್ ಅಫೇರ್ಸ್ ಸೆಂಟರ್, ಬೆಂಗಳೂರು' ಇವರಿಗೆ 5 ಎಕರೆ ಭೂಮಿಯನ್ನು ಲೀಸ್ ಆಧಾರದ ಮೇಲೆ ನೀಡುವ ಕುರಿತು.<br><br>ಠರಾವು:<br><br>ಚರ್ಚೆಯ ನಂತರ, ವಿವಿಧ ತಂತ್ರಜ್ಞಾನಗಳಿಂದ ಕೃಷಿಯಲ್ಲಿ ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರಿಸುವ ನಿಟ್ಟಿನಲ್ಲಿ ಸಾರ್ವಜನಿಕ ವ್ಯವಹಾರಗಳ ಕೇಂದ್ರ, ಬೆಂಗಳೂರು ಇವರು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಘಟಕವನ್ನು (Artificial Intelligence Centre) ಸ್ಥಾಪನೆಗೆ ಐದು ಎಕರೆ ಭೂಮಿಯನ್ನು 50 ವರ್ಷಗಳ ಅವಧಿಗಾಗಿ ಲೀಸ್ ಆಧಾರದಲ್ಲಿ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br><br>(ಕ್ರಮ : ಕುಲಸಚಿವರು)</td></tr>
<tr><td>ಹೆಚ್ಚುವರಿ ಕಾರ್ಯಸೂಚಿ ಐಟಂ–2</td><td>ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರ್ತ ನಿಧಿ, ಜಿ.ಪಿ.ಎಫ್, ಸಾಮಾನ್ಯ ನಿಧಿ ಹಾಗೂ ಟೈಯರ್–I ಖಾತೆಯಲ್ಲಿ ಉಳಿದಿರುವ ಹೆಚ್ಚಿನ ಮೊತ್ತವನ್ನು ಠೇವಣಿ ಇಡಲು ಅನುಮೋದನೆ ನೀಡುವ ಕುರಿತು.<br><br>ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಕುರಿತು ಆರ್ಥಿಕ ಇಲಾಖೆಯಿಂದ ಮಾರ್ಗಸೂಚಿಗಳನ್ನು ಹೊರಡಿಸಿರುವುದಾಗಿ ಸಭೆಯ ಗಮನಕ್ಕೆ ತರಲಾಯಿತು.<br><br>ಠರಾವು:<br>ದೀರ್ಘ ಚರ್ಚೆಯ ನಂತರ, ಆರ್ಥಿಕ ಇಲಾಖೆ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ವಯ ವಿಶ್ವವಿದ್ಯಾಲಯವು ಹೆಚ್ಚಿನ ಬಡ್ಡಿ ದರವನ್ನು ನೀಡುವಂತಹ ಭಾರತೀಯ ರಿಸರ್ವ ಬ್ಯಾಂಕ್‌ನಿಂದ ಮಾನ್ಯತೆ ಪಡೆದ ಖಾಶಗಿ ಸೆಡ್ಯೂಲ್ಡ್ ಬ್ಯಾಂಕ್‌ಗಳಲ್ಲಿ (Axis Bank Ltd., Kotak Mahindra Bank Ltd., ICICI & HDFC Bank Ltd.,) ಠೇವಣಿ ಇಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು. (ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)</td></tr>
<tr><td></td><td>ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು</td></tr>
<tr><td>1</td><td>ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಇವರು ಈ ಕೆಳಕಂಡ ಅಂಶಗಳ ಕುರಿತು ವಿಶ್ವವಿದ್ಯಾಲಯಗಳು ಹೆಚ್ಚಿನ ಗಮನ ನೀಡಲು ಸಲಹೆ ನೀಡಿದರು :<br>➢ ವಿಶ್ವವಿದ್ಯಾಲಯಗಳು ಸಮಗ್ರ ಕೃಷಿ ಪದ್ಧತಿ ಯೋಜನೆಯ ವಿಸ್ತರಣೆಯ ಕುರಿತು ಹೆಚ್ಚಿನ ಪ್ರಮಾಣದಲ್ಲಿ ಆಸಕ್ತಿವಹಿಸಿ, ಕ್ರಮಕೈಗೊಳ್ಳುವಂತೆ ಸಲಹೆ ನೀಡಿದರು.<br>➢ ವಿಶ್ವವಿದ್ಯಾಲಯದಲ್ಲಿ ಹಳೆಯ ತಳಿಗಳೇ ಇನ್ನೂ ಪ್ರಚಲಿತದಲ್ಲಿದ್ದು, ವಿಜ್ಞಾನಿಗಳು ಹೊಸ ತಳಿಗಳನ್ನು ಸಂಶೋಧಿಸುವಲ್ಲಿ ವಿಶ್ವವಿದ್ಯಾಲಯಗಳು ಸೂಕ್ತ ಕ್ರಮಕೈಗೊಳ್ಳುವುದು.<br>➢ ಸಂಶೋಧನೆಗಳು ಅಗತ್ಯತೆಯ ಆಧಾರದಮೇಲೆ ಕೈಗೊಳ್ಳಲು ಸಲಹೆ ನೀಡಿದರು.<br>(ಕ್ರಮ : ಸಂಶೋಧನಾ ನಿರ್ದೇಶಕರು / ವಿಸ್ತರಣಾ ನಿರ್ದೇಶಕರು)</td></tr>
</table>

| | |
|---|---|
| 2 | ಸಭೆಯ ಅಧ್ಯಕ್ಷರು, ಮಾನ್ಯ ವ್ಯವಸ್ಥಾಪನಾ ಮಂಡಳಿಗೆ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರನ್ನು ಮಂಡಳಿಯ ಸದಸ್ಯರನ್ನಾಗಿ ಕೋ–ಆಪ್ಟ್ ಮಾಡಿಕೊಳ್ಳುವ ವಿಷಯವನ್ನು ಪ್ರಸ್ತಾಪಿಸಲಾಗಿ, ಮಂಡಳಿಯು ಚಾಲ್ತಿಯಲ್ಲಿರುವ ನಿಯಮಾವಳಿಗಳನ್ನು ಪರಿಶೀಲಿಸಿ, ಪ್ರಸ್ತಾವನೆಯನ್ನು ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರಿಗೆ ಸಲ್ಲಿಸಲು ನಿರ್ಣಯಿಸಲಾಯಿತು.<br>**(ಕ್ರಮ : ಕುಲಸಚಿವರು)** |
| 3 | ಸಭೆಯ ಅಧ್ಯಕ್ಷರು, ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಕೃಷಿ ಸಂಶೋಧನಾ ಕೇಂದ್ರ ಮತ್ತು ಕೃಷಿ ವಿಜ್ಞಾನ ಕೇಂದ್ರವನ್ನು ಸ್ಥಾಪನೆ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಲಾಗಿ, ವಿಸ್ತೃತ ಪೂರಕ ಟಿಪ್ಪಣಿಯೊಂದಿಗೆ ಕಾರ್ಯಸೂಚಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸಭೆಯು ನಿರ್ಣಯಿಸಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು / ವಿಸ್ತರಣಾ ನಿರ್ದೇಶಕರು / ಕುಲಸಚಿವರು)** |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /– 20–9–2021 | ಸಹಿ /– 20–9–2021 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ.ಜಿ. ಪಾಟೀಲ)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ.ಜಿ. ಪಾಟೀಲ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.